**<u>1 ನೇ ಅಧಿಕ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. 1 ನೇ ನ್ಯಾಯಾಲಯ ಗದಗ</u>**

**<u>ಸಿ.ಸಿ. ಸಂ: 1287/23</u>** **ಸಿ.ಡಬ್ಲ್ಯೂ .4**
**ಪಿ.ಡಬ್ಲ್ಯೂ .4**

**ಸಾಕ್ಷಿಯ ಹೆಸರು :- ಸಿದ್ಧಪ್ಪ**
**ತಂದೆಯ ಹೆಸರು :- ಉಡಚಪ್ಪ ಹಿರೇತನದ**
**ವಯಸ್ಸು :- 38 ವರ್ಷಗಳು**
**ಉದ್ಯೋಗ :- ಅಬಕಾರಿ ಮುಖ್ಯ ಪೇದೆ**
**ವಾಸ ಸ್ಥಳ :- ಅಬಕಾರಿ ಉಪ ಆಯುಕ್ತರ ಕಚೇರಿ ಗದಗ**

**ದಿನಾಂಕ: 23-10-2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು:-**

**<u>ಸರ್ಕಾರಿ ಪರ ಅಭಿಯೋಜಕರಿಂದ ಸಾಕ್ಷಿಯ ಮುಖ್ಯ ವಿಚಾರಣೆ :-</u>**

ನಾನು ದಿಃ 2017 ರಿಂದ ಇಲ್ಲಿಯವರೆಗೆ ಅಬಕಾರಿಮುಖ್ಯ ಪೇದೆ ಆಗಿ ಅಬಕಾರಿ ಉಪಆಯುಕ್ತರ ಕಚೇರಿ ಗದಗನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ25-04-2023 ರಂದು ವಿಧಾನಸಭಾ ಚುನಾವಣೆ ನಿಮಿತ್ಯ ನೀತಿಸಂಹಿತೆ ಜಾರಿಯಲ್ಲಿದ್ದಾಗ ಮೇಲಾಧಿಕಾರಿಗಳ ಆದೇಶದ ಮೇರೆಗೆ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಮುಂಜಾನೆ 11-30 ಗಂಟೆ ಸುಮಾರಿಗೆ ಚಾಸಾ 1 ರವರೊಂದಿಗೆ ನಾನು ಹಾಗೂ ಚಾಸಾ 5 ರವರೊಂದಿಗೆ ಕೂಡಿ ಸರ್ಕಾರಿ ವಾಹನ ನಂ. ಕೆಎ-26-ಜಿ-0391 ನೇದ್ದಲ್ಲಿ ಗದಗ ಬೆಟಗೇರಿಯಲ್ಲಿ ಗಸ್ತು ಮಾಡುತ್ತಿರುವಾಗ ಬೆಳಗ್ಗೆ 11-45-ಗಂಟೆಗೆ ಚಾಸಾ 1 ರವರಿಗೆ ಬಾತ್ಮಿ ಬಂದಿದ್ದು, ಗಂಗಾಪೂರ ಪೇಟೆಯಲ್ಲಿ 1 ನೇ ಆರೋಪಿ ಸಂದೀಪ ಶಿವಾನಂದ ಚಿನ್ನೂರ ಎಂಬುವವನು ಅಕ್ರಮವಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದ ಮೇರೆಗೆ ನಂತರ ಚಾಸಾ 1 ರವರು ಗಾಂಧಿ ಸರ್ಕಲ್ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದ ಚಾಸಾ 2, 3 ಇಬ್ಬರು ಪಂಚರನ್ನು ಕರೆಸಿ, ಅವರಿಗೆ ಬಾತ್ಮಿ ಸಂಗತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದಾಗ ಸದರಿಯವರು ಒಪ್ಪಿದ್ದರಿಂದ ಚಾಸಾ 1 ರವರು, ಸದರಿಯವರಿಗೆ ಪಂಚರ ನೋಟಿಸು ನೀಡಿದರು. ಪಂಚರೊಂದಿಗೆ ಸೇರಿಕೊಂಡು ಬಾತ್ಮಿ ಬಂದ ಸ್ಥಳವಾದ ಗಂಗಾಪೂರ ಪೇಟೆ ಬಸ್ಸ ನಿಲ್ದಾಣದ ಹತ್ತಿರ 12-00 ಗಂಟೆಗೆ ರಸ್ತೆ ಗಾವಲು ನಿರ್ವಹಿಸುತ್ತಿರುವಾಗ ಗಂಗಾಪೂರ ಪೇಟೆಯಿಂದ ಒಂದು ದ್ವಿಚಕ್ರವಾಹನ ನಮ್ಮ ಹತ್ತಿರ ಬರುತ್ತಿದ್ದು ಸದರಿ ವಾಹನ ತಡೆದು ನಿಲ್ಲಿಸಲು ಪ್ರಯತ್ನಿಸುತ್ತಿದ್ದಂತೆ ವಾಹನ ಚಾಲಕನು ಓಡಲು ಪ್ರಯತ್ನಿಸುತ್ತಿರುವಾಗ ಅವನನ್ನು ನಾನು ಹಾಗೂ ಚಾಸಾ 5 ರವರು ಹಿಡಿದು ತಡೆದು ನೀಲ್ಲಿಸಿದೆವು. ಸದರಿ ವಾಹನ ತಪಾಸಣೆ ಮಾಡುವ ಅವಶ್ಯಕತೆ ಕಂಡುಬಂದಿದ್ದರಿಂದ ಸ್ಥಳದಲ್ಲಿ ಪಂಚರ ಸಮಕ್ಷಮ ಚಾಸಾ 1 ರವರು ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ಸದರಿ ವಾಹನ ತಪಾಸಣೆ ಮಾಡಲು ಪ್ರಾರಂಬಿಸಿದಾಗ ಸದರಿ ವಾಹನದಲ್ಲಿ 1-ಗೊಬ್ಬರ ಚೀಲ ಇತ್ತು ಅದನ್ನು ತೆಗೆದು ನೋಡಿದಾಗ ಅದರಲ್ಲಿ 90 ಎಂ ಎಲ್ ನ

5- ಹೈ ವರ್ಡ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಹಾಗೂ 90 ಎಂಎಲ್ ನ ಓರಿಜನಲ್ ಚಾಯ್ಸ್ 50 ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿತು. ಸದರಿ ದ್ವಿಚಕ್ರ ವಾಹನದ ನಂಬರ ನಮೂದು ಇಲ್ಲದ ಕಾರಣ ಬಜಾಜ ಕಂಪನಿಯ ಅವತಾರ ದ್ವಿಚಕ್ರ ವಾಹನ ಆಗಿದ್ದು ಸ್ಥಳದಲ್ಲಿ ವಾಹನ ಹಾಗೂ ಮುದ್ದೆ ಮಾಲನ್ನು ವಶಪಡಿಸಿಕೊಂಡು ಆ ರೋಪಿಯನ್ನು ದಸ್ತಗಿರಿ ಗೊಳಿಸಿ ಸ್ಥಳದಲ್ಲಿ ಮಾದರಿಗಾಗಿ ಜಪ್ತ ಪಡಿಸಿಕೊಂಡ ಎಲ್ಲಾ ಮದ್ಯವನ್ನು ರಸಾಯನ ಪರೀಕ್ಷೆಗಾಗಿ ಸದರಿ ಗೊಬ್ಬರ ಚೀಲದಿಂದ ಮಾದರಿ ತೆಗೆದು ದಾರ ಕಟ್ಟಿ, ಅರಗ ಕಟ್ಟಿ ಸರ್ಕಾರಿ ಸೀಲ್ ನಿಂದ ಸೀಲ್ ಮಾಡಿ, ಸ್ಥಳದಲ್ಲಿ ಮಾದರಿ ಚೀಟಿ ಹಾಗೂ ಮಾದರಿ ಮೊಹರಿನ ಚೀಟಿ ತಯಾರಿಸಿ ಪಂಚರ ಹಾಗೂ ನಮ್ಮಗಳ ಸಹಿ ಪಡೆದು ಸದರಿ ಮುದ್ದೆ ಮಾಲಿಗೆ ಅಂಟಿಸಲಾಗಿಯಿತು. ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ಮಧಾಹ್ನ 12-30 ರಿಂದ 1-30 ಗಂಟೆಯ ವರೆಗೆ ಮಾಡಲಾಯಿತು. ಚಾಸಾ 1 ರವರು ಕಚೇರಿಗೆ ಬಂದು ಆರೋಪಿಯ ವಿರುದ್ಧ ಗಣಕೀಕೃತ ದೂರನ್ನು ತಯಾರಿಸಿ, ಸರ್ಕಾರದ ತರ್ಫೆ ದೂರನ್ನು ನೀಡಿರುತ್ತಾರೆ. ನಂತರ ನಾನು ಚಾಸಾ 9 ರವರಿಗೆ ದಿಃ 04-07-2023 ರಂದು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಗೈರು ಹಾಜರು ಇರುವ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ . ಈ ಹಂತದಲ್ಲಿ ಆರೋಪಿ ಪರ ವಕೀಲರು ಆರೋಪಿ ಗುರುತಿಸುವಿಕೆಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿದಾರರು ಮು ಮಾ 1 ನೋಡಿ ಗುರುತಿಸಿರುತ್ತಾರೆ.

ನಿಪಿಃ 1 ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 1 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿ ಪರ ಶ್ರೀ ಟಿ ಎನ್ ಬಿ ವಕೀಲರಿಂದ**

ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಸಾರ್ವತ್ರಿಕ ಚೆಕ್ ಪೋಸ್ಟಗಳು ಇರುತ್ತವೆ ಎಂದರೆ ಸರಿ. ದಿಃ 25-04-2023 ರಂದು ಗಸ್ತ ಕರ್ತವ್ಯಕ್ಕೆ ಹೋಗಿದ್ದು ಚಲನ ವಲನ ಡೈರಿಯಲ್ಲಿ ನಮೂದು ಇರುತ್ತದೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ದಿನಾಂಕದಂದು ಗಸ್ತು ಕರ್ತವ್ಯಕ್ಕೆ ಒಟ್ಟು 4-ಜನ, ಬೆಳಗ್ಗೆ 11-00 ಗಂಟೆಗೆ ಹೋಗಿದ್ದೆವು. ಘಟನಾ ಜಾಗೆಯು ಸಾಕಷ್ಟು ಮನೆಗಳು ಇರುವ ಸ್ಥಳ ಇರುತ್ತದೆ ಎಂದರೆ ಸರಿ. ಸದರಿ ದಿನ ನಾವು ಅಂದಾಜು 3-4 ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ. ಸದರಿ ವಾಹನಗಳು ಯಾವ ವಾಹನಗಳು ಎಂದು ನನಗೆ ಹೇಳಲು ಬರುವುದಿಲ್ಲ. ಆ ದಿನ ಯಾವುದೇ ವಾಹನ ತಪಾಸಣೆ ಮಾಡದೇ ಇರುವುದರಿಂದ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಸ್ಥಳದಲ್ಲಿ 2 ತಾಸು ನಿಂತಿರುತ್ತೇವೆ.

ಆಗ ಚಾಸಾ 1, ಸ್ಥಳೀಯರನ್ನು ಪಂಚರಾಗಲು 2-3-ಜನರನ್ನು ಕೇಳಿರುತ್ತಾರೆ , ಆದರೆ ಅವರು ಒಪ್ಪಿರುವುದಿಲ್ಲ. ಅವರು ಯಾರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ವಾಹನ ತಪಾಸಣೆ ಮಾಡಿದಾಗ ಆರೋಪಿಗೆ ಶೋಧನಾ ತಿಳುವಳಿಕೆ ಕೊಟ್ಟಿರುವುದಿಲ್ಲ. ನಾನು ಸ್ಮಾರ್ಟ ಫೋನ್ ಉಪಯೋಗಿಸುತ್ತೇನೆ. ಸದರಿ ದಿನ ನಡೆದ ಘಟನೆಯ ಕುರಿತು ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆದಿರುವುದಿಲ್ಲ, ವಿಡಿಯೋ ಚಿತ್ರಿಕರಣ ಹಾಗೂ ಫೋಟೋ ತೆಗೆಯಲು ನನಗೆ ಯಾವುದೇ ತೊಂದರೆ ಇರುವುದಿಲ್ಲ .

ಸದರಿ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಹಾಕಿದ್ದನೆಂದು ನೆನಗೆ ಗೊತ್ತಿಲ್ಲ. ಜಪ್ತ ಮಾಡಿದ ಮುದ್ದೆ ಮಾಲುಗಳ ಜಪ್ತ ಯಾದಿ ಚಾಸಾ 1 ರವರು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನೆನಪಿಲ್ಲ ಎಂದು ನುಡಿಯುತ್ತಾರೆ. ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಪ್ರತ್ಯೇಕ ಅಂಗಡಿಯಿಂದ ಎಷ್ಟು ಮಾಲು ಮಾರಾಟ ಆಗಿರುತ್ತದೆ ಎಂದು ಮಾಹಿತಿಯನ್ನು ಠಾಣೆಗೆ ಕೊಡುತ್ತಾರೆ ಎಂದರೆ ಸರಿ. ಅಲ್ಲದೇ ನಗರದ ಬೇರೆ ಬೇರೆ ಇಲಾಖೆಯಲ್ಲಿ ಚೆಕ್ ಪೋಸ್ಟ ಗಳಲ್ಲಿ ನಮ್ಮ ಇಲಾಖೆಯವರು ಇರುತ್ತಾರೆ ಎಂದರೆ ಸರಿ . ಪ್ರತಿಯೊಂದು ಮದ್ಯದ ಅಂಗಡಿಗೆ ಗದಗನಲ್ಲಿ ಸಿಸಿ ಕ್ಯಾಮರಾ ಅಳವಡಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣ ಮುದ್ದೆ ಮಾಲಿಗೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ . ಸದರಿ ದಿನ ನಾನು ಹೋಗಿರುವುದಿಲ್ಲ , ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಮುದ್ದೆ ಮಾಲನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಸಂಹಿತೆ ಯಲ್ಲಿ ಹೆಚ್ಚಿಗೆ ಕೆಲಸ ಮಾಡಿರುತ್ತೇನೆಂದು ತೋರಿಸಲು ಎಲ್ಲಾ ದಾಖಲೆಗಳನ್ನು ಚಾಸಾ 1 ರವರು ಠಾಣೆಯಲ್ಲಿ ಸೃಷ್ಟಿಪಡಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ-1, ಗದಗ.